ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಕೃಷಿ ಉತ್ಪಾದನೆಗೆ ಒದಗಿಸಲಾದ ಕೃಷಿ ಸಾಮಗ್ರಿಗಳ ಬಗ್ಗೆ

೧೫೩. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ೧೯೮೭-೮೮ನೇ ಸಾಲಿನಲ್ಲಿ ಒದಗಿಸಲಾದ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಪ್ರಮಾಣವೆಷ್ಟು ;

ಆ) ಜಿಲ್ಲೆಯಲ್ಲಿ ೧೯೮೭-೮೮ನೇ ಸಾಲಿನಲ್ಲಿ ರಸಗೊಬ್ಬರಗಳನ್ನಲ್ಲದೆ ಅಧಿಕ ಕೃಷಿ ಉತ್ಪಾದನೆಗೆ ಒದಗಿಸಲಾದ ಇತರೆ ಕೃಷಿ ಸಾಮಗ್ರಿಗಳು ?

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೭-೮೮ನೇ ಸಾಲಿನಲ್ಲಿ(೧೯೮೭ರ ನವೆಂಬರ್ ಕೊನೆಯವರೆಗೆ) ರೈತರಿಗೆ ಒದಗಿಸಲಾದ ರಸಗೊಬ್ಬರಗಳ ಮತ್ತು ಬಿತ್ತನೆ ಬೀಜಗಳ ಪ್ರಮಾಣವು ಈ ಕೆಳಕಂಡಂತಿದೆ.

೧. ರಸಗೊಬ್ಬರಗಳು	...	೧೩,೬೧೧ ಟನ್ನುಗಳು
೨. ಗುಣಮಟ್ಟದ ಬಿತ್ತನೆ ಬೀಜಗಳು	...	೭,೨೪೦ ಕ್ವಿಂಟಾಲ್‌ಗಳು

ಇದಲ್ಲದೇ ದ್ವಿದಳ ಧಾನ್ಯಗಳ ಬಿತ್ತನೆ ಬೀಜಗಳನ್ನೊಳಗೊಂಡ ೧೭೦೬ ಕೃಷಿ ಸಾಮಗ್ರಿ ಚೀಲಗಳನ್ನು ಮತ್ತು ಭತ್ತದ ಬಿತ್ತನೆ ಬೀಜಗಳನ್ನೊಳಗೊಂಡ ೧೩೦೦ ಕಿರು ಚೀಲಗಳನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಉಚಿತವಾಗಿ ವಿತರಿಸಲಾಗಿದೆ.

ಆ) ರಸಗೊಬ್ಬರ ಮತ್ತು ಬಿತ್ತನೆ ಬೀಜಗಳಲ್ಲದೆ ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಸಸ್ಯ ಸಂರಕ್ಷಣಾ ಸಲಕರಣೆಗಳು ಮತ್ತು ನೀರೆತ್ತುವ ಪಂಪುಗಳನ್ನೂ ಸಹ ೧೯೮೭-೮೮ರಲ್ಲಿ ಹೆಚ್ಚಲಾಗಿದೆ.

ಬಳ್ಳಾರಿ-ಅನಂತಪುರ ರಸ್ತೆಯಲ್ಲಿ ಹಗರಿ ನದಿಗೆ ಅಡ್ಡಲಾಗಿ ಕಟ್ಟಬೇಕಾಗಿರುವ ಸೇತುವೆ ಕೆಲಸದ ಬಗ್ಗೆ

೨೪೦. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ-ಅನಂತಪುರ ರಸ್ತೆಯಲ್ಲಿ ಹಗರಿ ನದಿಗೆ ಅಡ್ಡಲಾಗಿ ಕಟ್ಟಬೇಕಾಗಿರುವ ಸೇತುವೆ ಕೆಲಸಕ್ಕೆ ಭಾರತ ಸರ್ಕಾರದವರು ೧೯೮೬-೮೭ ಮತ್ತು ೮೭-೮೮ರ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು ?

(ಆ) ಇಲ್ಲಿಯವರೆಗೆ ಖರ್ಚು ಮಾಡಿರುವ ಮೊತ್ತವೆಷ್ಟು ? ಮತ್ತು ಕೆಲಸದ ಪ್ರಗತಿ ಏನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

(ಅ) ಕೇಂದ್ರ ಸರ್ಕಾರದವರು ೫ ಆಂಡ್ ಐ ಸ್ಕೀಮ್‌ನಲ್ಲಿ ಪ್ರತಿ ಕೆಲಸಕ್ಕೆ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವುದಿಲ್ಲ. ೫ ಆಂಡ್ ಐ ಸ್ಕೀಮಿನಲ್ಲಿ ಬರುವ ಎಲ್ಲಾ ಕೆಲಸಗಳಿಗೆ ಸೇರಿದಂತೆ ೧೯೮೬-೮೭ರ ಸಾಲಿನಲ್ಲಿ ಒಟ್ಟು ೧೦೦ ಲಕ್ಷ ರೂ.ಗಳನ್ನು ಮತ್ತು ೧೯೮೭-೮೮ರ ಸಾಲಿನಲ್ಲಿ ರೂ. ೧೦೦ ಲಕ್ಷ ರೂ.ಗಳನ್ನು ಒದಗಿಸಿದ್ದಾರೆ. ರಾಜ್ಯ ಸರ್ಕಾರದ ಆಯವ್ಯಯ ಪಟ್ಟಿಯಲ್ಲಿ ಈ ಕಾಮಗಾರಿಗೆ ೧೯೮೬-೮೭ ರಲ್ಲಿ ೧೫ ಲಕ್ಷ ರೂ.ಗಳನ್ನು ೧೯೮೭-೮೮ ರಲ್ಲಿ ೧೫ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

(ಆ) ರೂ. ೧೪,೮೧,೩೧೬.